## ರಾಜ್ಯ

### 1. ವೆಂಕಟೇಶ್ ಕುಮಾರ್‌ಗೆ ಸುಕುಮಾರ ಶ್ರೀ ಪ್ರಶಸ್ತಿ:

* ಗುಬ್ಬಲಗುಡ್ಡಮಠದ ವತಿಯಿಂದ ಲಿಂ. ಹಾನಗಲ್ಲ ಕುಮಾರ ಶಿವಯೋಗಿಗಳ ಹೆಸರಿನಲ್ಲಿ ಪ್ರತಿ ವರ್ಷ ನೀಡಲಾಗುವ ರಾಜ್ಯಮಟ್ಟದ 'ಸುಕುಮಾರ ಶ್ರೀ ' ಪ್ರಶಸ್ತಿಗೆ ಈ ಬಾರಿ ಬಳ್ಳಾರಿ ಮೂಲದ ಸಂಗೀತ ವಿದ್ವಾನ್ , ಪದ್ಮಶ್ರೀ ಪುರಸ್ಕೃತ ಪ್ರೊ. ಎಂ. ವೆಂಕಟೇಶ್ ಕುಮಾರ್ ಆಯ್ಕೆಯಾಗಿದ್ದಾರೆ.

* ಪೀಠಾಧಿಕಾರಿ ಮಲ್ಲಿಕಾರ್ಜುನ ಮಹಾಸ್ವಾಮೀಜಿ ಹಾಗೂ ನಾಡಿನ ಹಲವಾರು ಶ್ರೀಗಳ ಸಮ್ಮುಖ ಬೆಳ್ಳಿಯ ಭಿನ್ನವತ್ತಳೆ, 25 ಸಾವಿರ ರೂ. ನಗದು ಜತೆಗೆ ಸನ್ಮಾನಿಸಲಾಗುತ್ತದೆ.

### 2. ರೂಪಾ ಹಾಸನಗೆ ಅಕ್ಕ ಪ್ರಶಸ್ತಿ:

* ಅಕ್ಕನ ಬಳಗದಿಂದ ಶರಣೆ ಅಕ್ಕ ಮಹಾದೇವಿ ಜಯಂತ್ಯುತ್ಸವ ಪ್ರಯುಕ್ತ ಪ್ರಸಕ್ತ ಸಾಲಿನ ಅಕ್ಕ ಪ್ರಶಸ್ತಿಗೆ ಅಂಕಣಕಾರ್ತಿ, ಮಹಿಳಾ ಹೋರಾಟಗಾರ್ತಿ ರೂಪಾ ಹಾಸನ ಭಾಜನರಾಗಿದ್ದಾರೆ.

* ನಗರದ ಮೃತ್ಯುಂಜಯ ಅಪ್ಪಗಳ ಭವನದಲ್ಲಿ ಅಕ್ಕನ ಬಳಗ ದಿಂದ ಏ. 1ರಂದು ಶರಣೆ ಅಕ್ಕಮಹಾದೇವಿ ಜಯಂತ್ಯುತ್ಸವ ಹಾಗೂ ಅಕ್ಕ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ.

### 3. ಬೆಂಗಳೂರಿನ ಸ್ಟಾರ್ಟಪ್ ಗೆ ಕೇಂದ್ರದಿಂದ ಭಾರಜಲ ಪೂರೈಕೆ:

* ಕೇಂದ್ರ ಪರಮಾಣು ಇಂಧನ ಇಲಾಖೆ ಇದೇ ಮೊದಲ ಬಾರಿಗೆ ಬೆಂಗಳೂರು ಮೂಲದ ಸ್ಟಾರ್ಟಪ್ ಜತೆಗೆ , ಭಾರಜಲ (ಹೆವಿ ವಾಟರ್) ಮೂಲದ ರಾಸಾಯನಿ ಕಗಳನ್ನು ಉತ್ಪಾದಿಸಲು ಒಪ್ಪಂದ ಮಾಡಿಕೊಂಡಿದೆ.

* ಪರಮಾಣು ಸ್ಥಾವರಗಳಲ್ಲಿ ವಿದ್ಯುತ್ ಉತ್ಪಾದನೆಗೆ ಬಳಕೆಯಾಗುವ ಭಾರ ಜಲದಿಂದ ಅಭಿವೃದ್ಧಿಪಡಿಸುವ ರಾಸಾಯನಿಕಗಳು, ವೈದ್ಯಕೀಯ ಹಾಗೂ ಕೈಗಾರಿಕಾ ಉದ್ದೇಶಕ್ಕೂ ಬೇಡಿಕೆಯಲ್ಲಿದೆ.

* ಸದ್ಯಕ್ಕೆ ಭಾರತ ಇವೆರಡಕ್ಕೂ ಯುರೋಪ್ , ಅಮೆರಿಕ ಮೂಲದಿಂದ ಆಮದನ್ನೇ ಹೆಚ್ಚು ಅವಲಂಬಿಸಿದೆ.

* ಮೇಕ್ ಇನ್ ಇಂಡಿಯಾ ಅಭಿಯಾನದ ಅಂಗವಾಗಿ , ಇದರ ಉತ್ಪಾದನೆಗೆ ಸ್ಟಾರ್ಟಪ್ ಸಿನೆಮಾರ್ ಕೆಮಿಕಲ್ಸ್ ಜತೆಗೆ ಇತ್ತೀಚೆಗೆ ಒಪ್ಪಂದ ಮಾಡಿಕೊಳ್ಳಲಾಗಿದೆ.

* ಪರಮಾಣು ಇಂಧನ ಇಲಾಖೆಯ ಹೆವಿ ವಾಟರ್ ಬೋರ್ಡ್ (ಎಚ್ ಡಬ್ಲುಬಿ) , ಸಿನೆಮಾರ್ ಜತೆಗೆ 10 ವರ್ಷಗಳ ಅವಧಿಯ ಎಂಒಯುಗೆ ಸಹಿ ಹಾಕಿದ್ದು , ಬೆಂಗಳೂರಿನ ಯಶವಂತಪುರ ದಲ್ಲಿನ ಸ್ಟಾರ್ಟಪ್‌ನ ಲ್ಯಾಬೊರೇಟರಿ ಯಲ್ಲಿ ಈ ರಾಸಾಯನಿಕಗಳು ಉತ್ಪಾದನೆಯಾಗಲಿವೆ.

* ಎಚ್‌ಡಬ್ಲುಬಿ ಪೂರೈಸಲಿರುವ ಹೆವಿ ವಾಟರನ್ನು ಬಳಸಿಕೊಂಡು, ಡ್ಯುಟೇರಿಯಂ ಲೇಬಲ್ಸ್ ಕಂಪೌಂಡ್ಸ್ , ಎನ್‌ಎಂಆರ್ ಸಾಲ್ವೆಂಟ್ ( NMR Solvents) ಮತ್ತಿತರ ರಾಸಾಯನಿಕ ಗಳನ್ನು ಸಿನೆಮಾರ್ ಉತ್ಪಾದಿಸಲಿದ್ದು , ಈ ಉದ್ದಿಮೆ ವಿಸ್ತರಣೆಯ ನಿಟ್ಟಿನಲ್ಲಿ ಹೂಡಿಕೆದಾರರ ಅನ್ವೇಷಣೆಯಲ್ಲಿದೆ.

ಕ್ಯಾನ್ಸರ್ ಸಂಶೋಧನೆ , ಮೆಡಿಕಲ್ ಡಯಾಗ್ನಸ್ಟಿಕ್ಸ್‌ಗಳಲ್ಲಿಯೂ ಬಳಕೆ ಯಾಗಲಿದೆ.

#### ಒಪ್ಪಂದದಿಂದ ಏನು ಲಾಭ?

* ಪರಮಾಣು ಇಂಧನ ಇಲಾಖೆ ಹಾಗೂ ಸ್ಟಾರ್ಟಪ್ ಜತೆಗಿನ ಒಪ್ಪಂದವು ದೇಶದಲ್ಲಿ ಪರಮಾಣು ಶಕ್ತಿಯೇತರ ಯೋಜನೆಗಳಲ್ಲಿ ಹೆವಿ ವಾಟರ್ ಮೂಲದ ರಾಸಾಯನಿಕಗಳ ಬಳಕೆಯನ್ನು ಉತ್ತೇಜಿಸಲಿದೆ.

* ಭಾರತದಲ್ಲಿಯೇ ತಯಾರಾಗುವುದರಿಂದ ಇಲ್ಲಿನ ಸಂಶೋಧಕರಿಗೆ ಸ್ಪರ್ಧಾತ್ಮಕ ದರದಲ್ಲಿ ಸಿಗಲಿದೆ.

* ಆಮದು ಮೇಲಿನ ಅವಲಂಬನೆ ತಗ್ಗಲಿದೆ. ಈ ಸ್ಟಾರ್ಟಪ್ ಈಗಾಗಲೇ ತನ್ನ ಉತ್ಪನ್ನಗಳನ್ನು ಐಐಎಸ್ಸಿ ,ಸಿಂಜಿನ್, ಅಪೊಟೆಕ್ಸ್ ಇತ್ಯಾದಿ ಕಂಪನಿಗಳಿಗೆ ಪೂರೈಸುತ್ತಿದೆ.

* ಆಗ್ನೇಯ ಏಷ್ಯಾ , ಚೀನಾ, ದಕ್ಷಿಣ ಆಫ್ರಿಕಾಕ್ಕೂ ರಫ್ತು ಮಾಡುತ್ತಿದೆ.

### 4. ಬಿಎಚ್‌ಇಎಲ್-ಇಸ್ರೋ ನಡುವೆ ಒಪ್ಪಂದ:

* ವಿಕ್ರಮ್ ಸಾರಾಭಾಯಿ ಬಾಹ್ಯಾಕಾಶ ಕೇಂದ್ರ (ವಿಎಸ್‌ಎಸ್ ಸಿ) ದಲ್ಲಿ ಅಭಿವೃದ್ಧಿಪಡಿಸಿರುವ

ತಂತ್ರಜ್ಞಾನವನ್ನು ಬಳಸಿ ಬಾಹ್ಯಾಕಾಶ ಶ್ರೇಣಿಯ ಲೀಥಿಯಂ-ಅಯಾನ್ ಕೋಶಗಳ ಉತ್ಪಾದನೆಗಾಗಿ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ದೊಂದಿಗೆ ತಂತ್ರಜ್ಞಾನ ವರ್ಗಾವಣೆ ಒಡಂಬಡಿಕೆಯೊಂದನ್ನು ಭಾರತ್ ಹೆವಿ ಎಲೆಕ್ಟ್ರಿಕಲ್ಸ್ ಲಿಮಿಟೆಡ್ (ಬಿಎಚ್‌ಇಎಲ್) ಮತ್ತು ಇಸ್ರೋ ಮಾಡಿಕೊಂಡಿದೆ.

* ಲೀಥಿಯಂ-ಅಯಾನ್ ತಂತ್ರಜ್ಞಾನವನ್ನು ಎನರ್ಜಿ ಸ್ಟೋರೇಜ್ ಮುಂತಾದ ಕ್ಷೇತ್ರಗಳಲ್ಲಿನ ಬಳಕೆಗೂ ವಿಸ್ತರಿಸಬಹುದಾಗಿದೆ.

### 5. ರಾಹುಲ್ ದ್ರಾವಿಡ್:

* ಕರ್ನಾಟಕ ಚುನಾವಣಾ ರಾಯಭಾರಿಯಾಗಿ ಆಯ್ಕೆಯಾಗುವ ಮೂಲಕ ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ರಾಹುಲ್ ದ್ರಾವಿಡ್ ಸುದ್ದಿಯಲ್ಲಿದ್ದಾರೆ.

* ಕರ್ನಾಟಕ ವಿಧಾನಸಭೆ ಚುನಾವಣೆ ದಿನಾಂಕ ಘೋಷಿಸಿದ ಮುಖ್ಯ ಚುನಾವಣಾ ಆಯುಕ್ತ ಒಪಿ ರಾವತ್ ಅವರು ರಾಹುಲ್ ದ್ರಾವಿಡ್ ಅವರನ್ನು ಚುನಾವಣಾ ರಾಯಭಾರಿಯ ರಾಗಿ ನೇಮಕ ಮಾಡಿದ್ದಾರೆ.

* ಸದ್ಯ ದ್ರಾವಿಡ್, ಅಂಡರ್ 19 ಭಾರತ ತಂಡದ ಕೋಚ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ.

* ಸಾಮಾಜಿಕ ಕಳಕಳಿಯನ್ನು ಹೊಂದಿರುವ ಇವರು ಯುನಿಸೆಫ್ ಏಡ್ಸ್ ಜಾಗೃತಿಯ ಪ್ರಚಾರ ರಾಯಭಾರಿಯಾಗಿ ಹಾಗೂ ಚೆಲ್ಲನ್ಸ್ ಮೂಮೆಂಟ್ ಫಾರ್ ಸಿವಿಕ್ ಅವೇರ್ನೆಸ್ (ಸಿಎಮ್‌ಸಿಎ) ಎಂಬ ಸರಕಾರೇತರ ಸಂಸ್ಥೆಯಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

* ತಂಬಾಕು ಸೇವೆಯ ವಿರುದ್ಧ ಜಾಗೃತಿ ಮೂಡಿಸುವ ಕಾರ್ಯದಲ್ಲೂ ಇದ್ದಾರೆ.

* ಕರ್ನಾಟಕ ಜ್ಞಾನ ಆಯೋಗದ ಸದಸ್ಯರಾಗಿದ್ದಾರೆ.

* ಕೇಂದ್ರ ಸರಕಾರದ ಮಹತ್ವಾಕಾಂಕ್ಷೆ ಯೋಜನೆಯಾದ ಟಾರ್ಗೆಟ್ ಒಲಿಂಪಿಕ್ಸ್ ಪೋಡಿಯಂ (ಟಿಒಪಿ) ಸದಸ್ಯರಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ.

* 2004ರಲ್ಲಿ ಬೆಂಗಳೂರಿನ ಗೋ ಸ್ಪೋರ್ಟ್ಸ್ ಪ್ರತಿಷ್ಠಾನದ ಸದಸ್ಯರಾಗಿ ನೇಮಕವಾಗಿದ್ದಾರೆ.

* ದ್ರಾವಿಡ್ ಅವರು ಭಾರತೀಯ ಕ್ರಿಕೆಟ್‌ಗೆ ನೀಡಿದ ಅನುಪಮ ಸೇವೆಯನ್ನು ಪರಿಗಣಿಸಿ ಭಾರತ ಸರಕಾರ 2004ರಲ್ಲಿ ಪದ್ಮಶ್ರೀ ಹಾಗೂ 2013ರಲ್ಲಿ ಪದ್ಮಭೂಷಣ ಪ್ರಶಸ್ತಿ ನೀಡಿ ಗೌರವಿಸಿದೆ.

* ದಿ ವಾಲ್ ಗೌರವದ ದ್ರಾವಿಡ್ , ಜನವರಿ 11, 1973ರಲ್ಲಿ ಮಧ್ಯಪ್ರದೇಶದ ಇಂದೋರ್‌ನಲ್ಲಿ ಜನಿಸಿದರು.

## ರಾಷ್ಟ್ರೀಯ

### 1. ಉಕ್ಕು ಉತ್ಪಾದನೆಯಲ್ಲಿ ಭಾರತ ನಂ. 2, ಚೀನಾ ನಂ.1:

* ವಿಶ್ವದಲ್ಲಿಯೇ ಎರಡನೇ ಎ ಅತಿ ಹೆಚ್ಚು ಉಕ್ಕು ಉತ್ಪಾದಿಸುವ ರಾಷ್ಟ್ರವಾಗಿ ಭಾರತ 2017ರಲ್ಲಿ ಈ ಹೊರಹೊಮ್ಮಿದ್ದು, ಜಪಾನ್ ಅನ್ನು 84 ಹಿಂದಿಕ್ಕಿದೆ.

* ಮೊದಲ ಸ್ಥಾನದಲ್ಲಿ ಚೀನಾ ಭ ಇದೆ. 2017ರ ತನಕ ಭಾರತ ಮೂರನೇ ಸ್ಥಾನದಲ್ಲಿ ಇತ್ತು.

* ಜಪಾನ್‌ಎರಡನೇ ಸ್ಥಾನದಲ್ಲಿತ್ತು. ಕಳೆದ ಈ ಫೆಬ್ರವರಿಯಲ್ಲಿ ಜಪಾನ್‌ನ ಉಕ್ಕು ವ ಉತ್ಪಾದನೆ 82 ಲಕ್ಷ ಟನ್ ಇದ್ದರೆ, ಭಾರತ 84 ಲಕ್ಷ ಟನ್ ಉತ್ಪಾದಿಸಿದೆ.

* ಜಪಾನನ್ನು ಭಾರತ ಹಿಂದಿಕ್ಕಿದೆ.

* ಜನವರಿ-ಫೆಬ್ರವರಿ ಈ ಎರಡೂ ತಿಂಗಳಿನಲ್ಲಿ ಭಾರತ ಮುಂಚೂಣಿಯಲ್ಲಿತ್ತು.

* ಜಪಾನ್‌ನಲ್ಲಿ ಉಕ್ಕು ಉದ್ದಿಮೆ ಮಂದಗತಿಗೆ ತಿರುಗಿದೆ.

* ಈ ನಡುವೆ ಭಾರತ ಸರಕಾರ ಉಕ್ಕು ಉತ್ಪಾದನೆ ಹೆಚ್ಚಿಸಲು ಕ್ರಮ ಕೈಗೊಂಡಿದೆ.

### 2. ಎಸ್‌ಸಿ/ಎಸ್ಟಿ ಕೋಟಾಕ್ಕಿಲ್ಲ ಕೆನೆಪದರದ ಪರಿಕಲ್ಪನೆ:

* ಪರಿಶಿಷ್ಟ ಜಾತಿ (ಎಸ್ಸಿ) ಮತ್ತು ಪರಿಶಿಷ್ಟ ಪಂಗಡ (ಎಸ್‌ಟಿ)ದವರು ಸಂಪೂರ್ಣವಾಗಿ ಹಿಂದುಳಿದವರು ಎಂಬ ಕಾರಣಕ್ಕೆ ಅವರಿಗೆ ಕೊಟ್ಟಿರುವಂಥ ಮೀಸಲು ಸೌಲಭ್ಯದಲ್ಲಿ ಕೆನೆಪದರದ ಪರಿಕಲ್ಪನೆಯನ್ನು ಅನ್ವಯಿಸಲಾಗದು ಎಂದು ಕೇಂದ್ರ ಸರ್ಕಾರ ಬುಧವಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

* ಎಸ್‌ಸಿ/ಎಸ್ಟಿ ಸಮುದಾಯದ ಶ್ರೀಮಂತರನ್ನು ಮೀಸಲು ಸೌಲಭ್ಯ ಪಡೆಯುವುದರಿಂದ ಹೊರಗಿರಿಸಬೇಕು ಎಂದು

JNANAGANGOTHRI
Inspiring to serve...

ಆಗ್ರಹಿಸಿದ ಸಮತಾ ಆಂದೋಲನ್ ಸಮಿತಿ ಎಂಬ ಸರ್ಕಾರೇತರ ಸಂಸ್ಥೆ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ(ಪಿಐಎಲ್) ದಾಖಲಿಸಿತ್ತು.

* ಇದರ ವಿಚಾರಣೆ ನಡೆಸುತ್ತಿರುವ ಸುಪ್ರೀಂ ಕೋರ್ಟ್ , ಈ ವಿಚಾರದಲ್ಲಿ ಕೇಂದ್ರ ಸರ್ಕಾರದ ಅಭಿಪ್ರಾಯ ಕೋರಿತ್ತು.

* ಇದರಂತೆ, ಕೇಂದ್ರ ಸರ್ಕಾರದ ಪರ ವಾದ ಮಂಡನೆ ಮಾಡಿದ ಹೆಚ್ಚುವರಿ ಸಾಲಿಸಿಟರ್ ಜನರಲ್ ಪಿ.ಎಸ್.ನರಸಿಂಹನ್ ಎಸ್ಸಿ ಎಸ್ಟಿಗಳ ವಿಚಾರದಲ್ಲಿ ಕೆನೆಪದರ ಪರಿಕಲ್ಪನೆ ಅನ್ವಯಿಸುವುದು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದರು.

### 3. ಶತ್ರು ಆಸ್ತಿ ಮಾರಾಟ ಪ್ರಕ್ರಿಯೆಗೆ ಚಾಲನೆ:

* ಕೇಂದ್ರ ಸರ್ಕಾರವು 9,400ಕ್ಕಿಂತಲೂ ಹೆಚ್ಚಿನ ಶತ್ರು ಆಸ್ತಿಗಳನ್ನು ಮಾರಾಟ ಮಾಡುವ ಪ್ರಕ್ರಿಯೆಗೆ ಚಾಲನೆ ನೀಡಿದೆ.

* ಈ ಸಂಬಂಧ ಶತ್ರು ಆಸ್ತಿಗಳ ಸಂರಕ್ಷಣಾ ಕಚೇರಿಗೆ ಮಾರ್ಗಸೂಚಿಗಳನ್ನು ನೀಡಿರುವ ಸರ್ಕಾರ , ಮೂರು ತಿಂಗಳೊಳಗೆ ಇಂಥ ಸ್ಥಿರ ಹಾಗೂ ಚರ ಆಸ್ತಿಗಳ ಪಟ್ಟಿಯನ್ನು ನೀಡುವಂತೆ ನಿರ್ದೇಶಿಸಿದೆ.

* ಶತ್ರು ಆಸ್ತಿಗಳ ಮಾರಾಟದಿಂದ ಸರ್ಕಾರದ ಬೊಕ್ಕಸಕ್ಕೆ ಸುಮಾರು ಒಂದು ಲಕ್ಷ ಕೋಟಿ ರೂ. ಸಂದಾಯವಾಗುವ ನಿರೀಕ್ಷೆಯಿದೆ.

* ಶತ್ರು ಆಸ್ತಿ (ತಿದ್ದುಪಡಿ ಹಾಗೂ ಊರ್ಜಿತ) ಕಾಯ್ದೆ 2017 ಹಾಗೂ ಶತ್ರು ಆಸ್ತಿ (ತಿದ್ದುಪಡಿ) ನಿಯಮಗಳು 2018ಕ್ಕೆ ತಿದ್ದುಪಡಿ ಆಗಿರುವ ಹಿನ್ನೆಲೆಯಲ್ಲಿ ಸರ್ಕಾರ ಈ ಕ್ರಮಕ್ಕೆ ಮುಂದಾಗಿದೆ.

* ವಿಭಜನೆ ಹಾಗೂ ಆ ಬಳಿಕ ಪಾಕಿಸ್ತಾನ ಹಾಗೂ ಚೀನಾಕ್ಕೆ ವಲಸೆ ಹೋಗಿರುವವರಿಗೆ ಭಾರತದಲ್ಲಿ ಅವರು ಬಿಟ್ಟು ಹೋಗಿರುವ ಆಸ್ತಿಗಳ ಮೇಲೆ ಯಾವುದೇ ಹಕ್ಕಿಲ್ಲ ಎಂಬುದನ್ನು ಈ ಎರಡು ಕಾಯ್ದೆಗಳು ಎತ್ತಿ ಹಿಡಿದಿವೆ.

### ಶತ್ರು ಆಸ್ತಿಗಳು ಯಾವುವು?:

* 1962ರ ಭಾರತ ಮತ್ತು ಚೀನಾ ಯುದ್ಧ , 1965 ಹಾಗೂ 1971ರ ಭಾರತ ಮತ್ತು ಪಾಕಿಸ್ತಾನ ನಡುವಿನ ಯುದ್ಧಗಳ ಬಳಿಕ ಕೇಂದ್ರ ಸರ್ಕಾರವು ಭಾರತದಲ್ಲಿರುವ ಚೀನಾ ಮತ್ತು ಪಾಕಿಸ್ತಾನ ನಾಗರಿಕರ ಆಸ್ತಿಗಳನ್ನು ಮುಟ್ಟುಗೋಲು ಹಾಕಿತ್ತು.

* ಭಾರತದ ರಕ್ಷಣಾ ಕಾಯ್ದೆಗಳ ಅಡಿಯಲ್ಲಿ ಕೇಂದ್ರ ಸರ್ಕಾರ ಈ ಕ್ರಮ ಕೈಗೊಂಡಿತ್ತು.

* ಈ ಕಾಯ್ದೆಗಳು ಭಾರತ ಹಾಗೂ ಅದರ ನಾಗರಿಕರ ವಿರುದ್ಧ ಆಕ್ರಮಣ ಮಾಡಿದ ರಾಷ್ಟ್ರವನ್ನು ಶತ್ರು ' ಎಂದು ಹೆಸರಿಸಿವೆ.

* ಭಾರತದಲ್ಲಿರುವ ಈ ರಾಷ್ಟ್ರಗಳ ನಾಗರಿಕರ ಆಸ್ತಿಯನ್ನು ಶತ್ರು ಆಸ್ತಿಗಳು ಎಂದು ವಿಂಗಡಿಸಲಾಗಿದೆ.

* ಈ ಆಸ್ತಿಯು ಜಮೀನು , ಕಟ್ಟಡಗಳು, ಕಂಪನಿಗಳಲ್ಲಿ ಹೊಂದಿರುವ ಷೇರುಗಳು , ಚಿನ್ನ ಮತ್ತು ಆಭರಣಗಳನ್ನು ಒಳಗೊಂಡಿದೆ.

* ಈ ಆಸ್ತಿಗಳ ನಿರ್ವಹಣೆ ಜವಾಬ್ದಾರಿಯನ್ನು ಶತ್ರು ಆಸ್ತಿ ಸಂರಕ್ಷಣಾ ಕಚೇರಿಯ ಸುಪರ್ದಿಗೆ ವಹಿಸಲಾಗಿದೆ.

* ಈ ಕಚೇರಿಯು ಕೇಂದ್ರ ಸರ್ಕಾರದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ.

* ಅಲ್ಲದೆ, ರಾಜ ಮೊಹಮ್ಮದ್ ಅಮೀರ್ ಮೊಹಮ್ಮದ್ ಖಾನ್ ಎಂಬುವರು ಉತ್ತರ ಪ್ರದೇಶ ಹಾಗೂ ಉತ್ತರಾಖಂಡದಲ್ಲಿರುವ ತನ್ನ ಆಸ್ತಿಯ ಮೇಲೆ ಹಕ್ಕು ಸಾಧಿಸಲು ಪ್ರಯತ್ನಿಸಿದ್ದ ಹಿನ್ನೆಲೆಯಲ್ಲಿ ಭಾರತ ಸರ್ಕಾರ ಶತ್ರು ಆಸ್ತಿ ಕಾಯ್ದೆ 1968 ಅನ್ನು ಅನುಷ್ಠಾನಗೊಳಿಸಿತು.

* ಈ ಕಾಯ್ದೆ ಶತ್ರು ಆಸ್ತಿಗಳನ್ನು ನಿರ್ವಹಿಸುವ ಜತೆಗೆ ಅದರ ಸಂರಕ್ಷಣಾ ಜವಾಬ್ದಾರಿಯನ್ನು ನಿಯಂತ್ರಿಸುತ್ತದೆ.

### 9,400ಕ್ಕಿಂತಲೂ ಹೆಚ್ಚಿನ ಆಸ್ತಿಗಳು:

* ಭಾರತದಲ್ಲಿ 9,400ಕ್ಕಿಂತಲೂ ಹೆಚ್ಚಿನ ಶತ್ರು ಆಸ್ತಿಗಳಿವೆ.

* ಇದರಲ್ಲಿ 9,280 ಆಸ್ತಿಗಳು ಪಾಕಿಸ್ತಾನದಲ್ಲಿರುವ ನಾಗರಿಕರಿಗೆ ಸೇರಿದೆ.

* ಇದರಲ್ಲಿ ಅತ್ಯಧಿಕ ಅಂದರೆ 4,991 ಆಸ್ತಿಗಳು ಉತ್ತರ ಪ್ರದೇಶದಲ್ಲಿವೆ.

* ಪಶ್ಚಿಮ ಬಂಗಾಳದಲ್ಲಿ 2,735, ದೆಹಲಿಯಲ್ಲಿ 487 ಶತ್ರು ಆಸ್ತಿಗಳಿವೆ.

* ಇನ್ನು ಚೀನಾದ ನಾಗರಿಕರ 126 ಆಸ್ತಿಗಳು ಭಾರತದಲ್ಲಿವೆ.

* ಇದರಲ್ಲಿ ಮೇಘಾಲಯದಲ್ಲಿ 57, ಪಶ್ಚಿಮ ಬಂಗಾಳದಲ್ಲಿ 29 ಹಾಗೂ ಅಸ್ಸಾಂನಲ್ಲಿ 7 ಆಸ್ತಿಗಳಿವೆ.

ಮೌಲ್ಯ ನಿರ್ಧರಣಾ ಸಮಿತಿ ನೇಮಕ:

* ಗೃಹ ಸಚಿವಾಲಯವು ಶತ್ರು ಆಸ್ತಿಗಳ ಮೌಲ್ಯವನ್ನು ನಿರ್ಧರಿಸಲು ಜಿಲ್ಲಾ ಮಟ್ಟದಲ್ಲಿ ಮೌಲ್ಯ ನಿರ್ಧರಣಾ ಸಮಿತಿಯನ್ನು ರಚಿಸಿದೆ. * ಜಿಲ್ಲಾಧಿಕಾರಿ ಈ ಸಮಿತಿಯ ಮುಖ್ಯಸ್ಥರಾಗಿದ್ದು, ಇಬ್ಬರು ಅಧಿಕಾರಿಗಳು ಸದಸ್ಯರಾಗಿರುತ್ತಾರೆ.

* ಶತ್ರು ಆಸ್ತಿಯಿರುವ ಪ್ರದೇಶದಲ್ಲಿ ಸದ್ಯ ಚಾಲ್ತಿಯಲ್ಲಿರುವ ಮೌಲ್ಯಕ್ಕೆ ಅನುಗುಣವಾಗಿ ಈ ಸಮಿತಿ ಬೆಲೆ ನಿಗದಿಪಡಿಸುತ್ತದೆ.

* ಈ ಸಮಿತಿ ನೀಡಿದ ವರದಿ ಆಧರಿಸಿ ಶತ್ರು ಆಸ್ತಿಗಳ ಸಂರಕ್ಷಣಾ ಕಚೇರಿ ಕೇಂದ್ರ ಸರ್ಕಾರಕ್ಕೆ ರಾಜ್ಯವಾರು ಪಟ್ಟಿಯನ್ನು ನೀಡುತ್ತದೆ.

ವಿಲೇವಾರಿ ಸಮಿತಿ:

* ಶತ್ರು ಆಸ್ತಿ ವಿಲೇವಾರಿ ಸಮಿತಿಯನ್ನು ಕೂಡ ಕೇಂದ್ರ ಸರ್ಕಾರ ರಚಿಸಿದೆ.

* ಗೃಹ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಇದರ ಮುಖ್ಯಸ್ಥರಾಗಿರುತ್ತಾರೆ.

* ಶತ್ರು ಆಸ್ತಿಗಳನ್ನು ಹೇಗೆ ವಿಲೇವಾರಿ ಮಾಡಬಹುದು ಎಂಬ ಬಗ್ಗೆ ಈ ಸಮಿತಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತದೆ.

* ಆಸ್ತಿಯನ್ನು ಮಾರಾಟ ಮಾಡಬಹುದೇ ಅಥವಾ ಕೇಂದ್ರ ಸರ್ಕಾರದ ಸಚಿವಾಲಯಗಳಿಗೆ ಬಳಸಿಕೊಳ್ಳಬಹುದೇ ಎಂಬ ಬಗ್ಗೆ ಸಲಹೆ, ಸೂಚನೆಗಳನ್ನು ಈ ಸಮಿತಿ ನೀಡುತ್ತದೆ.

## ಕ್ರೀಡೆ

### 1. ಸ್ಮಿತ್ ವಾರ್ನರ್ ಗೆ 1 ವರ್ಷ ನಿಷೇಧ:

* ವಿಶ್ವ ಮಟ್ಟದಲ್ಲಿ ಆಸ್ಟ್ರೇಲಿಯಾದ ಕ್ರಿಕೆಟ್ ಘನತೆಗೆ ಮಸಿ ಬಳಿದಿದ್ದ ಚೆಂಡು ವಿರೂಪ ಪ್ರಕರಣದಲ್ಲಿ ಸ್ಟಾರ್ ಆಟಗಾರರಾದ ಸ್ಟೀವನ್ ಸ್ಮಿತ್ ಹಾಗೂ ಡೇವಿಡ್ ವಾರ್ನರ್ ತಲೆದಂಡವಾಗಿದೆ.

* ಕ್ರಿಕೆಟ್ ಆಸ್ಟ್ರೇಲಿಯಾದ (ಸಿಎ) ಇಂಟೆಗ್ರಿಟಿ ಯೂನಿಟ್ ಪ್ರಾಥಮಿಕ ತನಿಖೆಯ ಅನುಸಾರ ಸ್ಟೀವನ್ ಸ್ಮಿತ್ ಹಾಗೂ ಡೇವಿಡ್ ವಾರ್ನರ್ ಗೆ ಒಂದು ವರ್ಷ ನಿಷೇಧ ಶಿಕ್ಷೆ ವಿಧಿಸಲಾಗಿದೆ.

* ಇನ್ನು ಕೇಪ್ ಟೌನ್ ಟೆಸ್ಟ್‌ನಲ್ಲಿ ಚೆಂಡು ವಿರೂಪ ಮಾಡಿದ್ದ ಕ್ಯಾಮರೂನ್ ಬ್ಯಾಂಕ್ರಾಫ್ಟ್‌ಗೆ 9 ತಿಂಗಳ ಅಮಾನತು ಶಿಕ್ಷೆ ವಿಧಿಸಲಾಗಿದೆ.

* ಇದರನ್ವಯ ಸ್ಟೀವನ್ ಸ್ಮಿತ್ ಹಾಗೂ ಡೇವಿಡ್ ವಾರ್ನರ್ 2018ರ ಐಪಿಎಲ್‌ನಿಂದಲೂ ಹೊರಗುಳಿಯುವಂತಾಗಿದೆ.

* ಆಸ್ಟ್ರೇಲಿಯಾದ ಎಲ್ಲ ಮಾದರಿಯ ಎಲೈಟ್ ಕ್ರಿಕೆಟ್ ಟೂರ್ನಿಗಳಿಗೆ ನಿಷೇಧ ಅನ್ವಯವಾಗಲಿದ್ದು , ಗ್ರೇಡ್ ಕ್ರಿಕೆಟ್ ನಲ್ಲಿ ಆಡಲು ಅನುಮತಿ ಇರಲಿದೆ.

* ಮಂಗಳವಾರ ಜೊಹಾನ್ಸ್ ಬರ್ಗ್‌ನಲ್ಲಿ ಸುದ್ದಿಗೋಷ್ಠಿ ಯಲ್ಲಿ ಕ್ರಿಕೆಟ್ ಆಸ್ಟ್ರೇಲಿಯಾ ಸಿಇಒ ಜೇಮ್ಸ್ ಸುದರ್‌ಲೆಂಡ್ , ಪ್ರಕರಣದಲ್ಲಿ ಕೋಚ್ ಡರೇನ್ ಲೆಹ್ಮನ್‌ಗೆ ಕ್ಲೀನ್‌ಚಿಟ್ ನೀಡಿದ್ದರೆ, ಸ್ಮಿತ್, ವಾರ್ನರ್ ಹಾಗೂ ಬ್ಯಾಂಕ್ರಾಫ್ ರನ್ನು ತಪ್ಪಿತಸ್ಥರು ಎಂದು ತಿಳಿಸಿದ್ದರು. * ನಿಷೇಧ ಶಿಕ್ಷೆ ಪ್ರಕಟವಾಗುವ ಮುನ್ನವೇ ಡೇವಿಡ್ ವಾರ್ನರ್ ಸನ್ ರೈಸರ್ ತಂಡದ ನಾಯಕತ್ವದಿಂದ ಕೆಳಗಿಳಿಯುವ ತೀರ್ಮಾನ ಮಾಡಿದ್ದರು.

### 2. ಚೆಂಡು ವಿರೂಪ:

* ಬಾಲ್ ಟ್ಯಾಂಪರಿಂಗ್ ಬಾ ಪ್ರಕರಣದ ಹಿನ್ನೆಲೆ ಯಲ್ಲಿ ಆಸ್ಟ್ರೇಲಿಯಾ ಕ್ರಿಕೆಟ್ ತಂಡದ ನಾಯಕ ಸ್ಟೀವ್ ಸ್ಮಿತ್ ಮತ್ತು ಉಪ ನಾಯಕ ಡೇವಿಡ್ ವಾರ್ನರ್ ಅವರನ್ನು ಕ್ರಿಕೆಟ್ ಆಸ್ಟ್ರೇಲಿಯಾ ಒಂದು ವರ್ಷದ ಮಟ್ಟಿಗೆ ಕ್ರಿಕೆಟ್ ಆಡದಂತೆ ನಿಷೇಧಿಸಿದೆ.

* ಈ ಹಿನ್ನೆಲೆಯಲ್ಲಿ ಬಾಲ್ ಟ್ಯಾಂಪರಿಂಗ್ ಎಂದರೇನು ತಿಳಿದುಕೊಳ್ಳೋಣ ಬನ್ನಿ.

ಏನಿದು ಬಾಲ್ ಟ್ಯಾಂಪರಿಂಗ್ ?

* ಸಾಮಾನ್ಯವಾಗಿ 40 ಓವರ್‌ಗಳ ನಂತರ ಚೆಂಡು ಹಳೆಯದಾಗಿ ಮೊದಲಿದ್ದ ಹೊಳಪನ್ನು ಕಳೆದುಕೊಳ್ಳುತ್ತದೆ.

* ಆಗ ಚೆಂಡಿನ ಒಂದು ಬದಿಗೆ ಮಾತ್ರ ಹೊಳಪು ಬರುವಂತೆ ಮಾಡಲು ಆಟಗಾರರು ಸ್ಯಾಂಡ್ ಪೇಪರ್ , ಬಾಟಲ್‌ನ ಮುಚ್ಚಳ , ಮಿಂಟ್, ಹೇರ್ ಜೆಲ್ ಹಾಗೂ ವ್ಯಾಸಲೈನ್‌ನಂತಹ ನಾನಾ ತಂತ್ರಗಳನ್ನು ಬಳಸುತ್ತಾರೆ.

### ವಿವಾದವೇನು?

* ದಕ್ಷಿಣ ಆಫ್ರಿಕಾದ ಕೇಪ್‌ಟೌನ್‌ನಲ್ಲಿ ನಡೆದ ಆತಿಥೇಯ ದಕ್ಷಿಣ ಆಫ್ರಿಕಾ ವಿರುದ್ಧದ 3ನೇ ಟೆಸ್ಟ್ ಪಂದ್ಯದಲ್ಲಿ ಆಸ್ಟ್ರೇಲಿಯಾದ ಆರಂಭಿಕ ಬ್ಯಾಟ್ಸ್‌ಮನ್ ಕ್ಯಾಮರಾನ್ ಬ್ಯಾಂಕ್ರಾಫ್ಟ್ ಚೆಂಡನ್ನು ವಿರೂಪಗೊಳಿಸಿರುವುದು ಬಯಲಾಗಿತ್ತು.

* ಅಲ್ಲದೆ ಇದನ್ನು ನಾಯಕ ಸ್ಟೀವನ್ ಸ್ಮಿತ್ ಅವರೇ ಸುದ್ದಿಗೋಷ್ಠಿಯಲ್ಲಿ ಒಪ್ಪಿಕೊಂಡಿದ್ದರು.

* ಬಾಲ್ ಟ್ಯಾಂಪರಿಂಗ್ ನಡೆಸಲು ಆಸೀಸ್ ತಂಡ ವ್ಯವಸ್ಥಿತವಾಗಿ ಯೋಜನೆ ರೂಪಿಸಿತ್ತು ಎಂಬ ಆಘಾತಕಾರಿ ಅಂಶ ಬೆಳಕಿಗೆ ಬಂದಿತ್ತು.

### ಬಯಲಿಗೆ ಬಂದಿದ್ದು ಹೇಗೆ?

* ಕೇಪ್‌ಟೌನ್ ಟೆಸ್ಟ್ ಪಂದ್ಯದಲ್ಲಿ ಆಸ್ಟ್ರೇಲಿಯಾ ಆಟಗಾರ ಕ್ಯಾಮರಾನ್ ಬ್ಯಾಂಕ್ರಾಫ್ಟ್ ಬಾಲ್ ಟ್ಯಾಂಪರಿಂಗ್ ನಡೆಸುತ್ತಿದ್ದ ದೃಶ್ಯವನ್ನು ಕ್ಯಾಮೆರಾಮನ್ ಆಸ್ಕರ್ ತಮ್ಮ ಕೆಮರಾದಲ್ಲಿ ಸೆರೆ ಹಿಡಿದಿದ್ದರು.

* ದಕ್ಷಿಣ ಆಫ್ರಿಕಾದ ಟಿವಿ ಚಾನೆಲ್ ಒಂದರ ಮುಂಚೂಣಿಯ ಕೆಮರಾಮ್ಯಾನ್ ಆಗಿರುವ ಆಸ್ಕರ್ , ಆಸ್ಟ್ರೇಲಿಯಾ ಆಟಗಾರರ ಕಳ್ಳಾಟವನ್ನು ತಮ್ಮ ಕೆಮರಾ ಕಣ್ಣಿನಲ್ಲಿ ಸೆರೆ ಹಿಡಿದು ದಿನ ಬೆಳಗಾಗುವುದರೊಳಗೆ ಎಲ್ಲರ ಗಮನವನ್ನು ತಮ್ಮತ್ತ ಸೆಳೆದಿದ್ದಾರೆ.

### ಸ್ಯಾಂಡ್ ಪೇಪರ್,ಮಿಂಟ್:

* ಚಿಕ್ಕ ಸ್ಯಾಂಡ್ ಪೇಪರ್ ಒಂದನ್ನು ಪ್ಯಾಂಟ್‌ನ ಜೇಬಿನಲ್ಲಿಟ್ಟುಕೊಳ್ಳುವ ಆಟಗಾರರು , ಅಗತ್ಯವೆನಿಸಿದಾಗ ಅದನ್ನು ಹೊರತೆಗೆದು ಅಂಗೈಗೆ ಅಳವಡಿಸಿ ಅದರ ಗಡಸಾದ ಭಾಗದಿಂದ ಚೆಂಡನ್ನು ಉಜ್ಜುತ್ತಾರೆ.

* ಇದರಿಂದ ಚೆಂಡಿನ ಹೊಳಪು ಮಾಯವಾಗುತ್ತದೆ.

* ಅದೇ ರೀತಿ ಚಾಕೋಲೇಟ್ ಗಾತ್ರದ ಮಿಂಟ್ ಅನ್ನು ಬಾಯಲ್ಲಿ ಹಾಕಿಕೊಳ್ಳುವ ಆಟಗಾರರು ಅದರ ದ್ರವವನ್ನು ಚೆಂಡಿಗೆ ಬಳಿದು ಉಜ್ಜುತ್ತಾರೆ.

* ಈ ರೀತಿಯಾಗಿ ಚೆಂಡು ವಿರೂಪಗೊಳಿಸುತ್ತಾರೆ.

### ರಿವರ್ಸ್ ಸ್ವಿಂಗ್ ಹೇಗೆ?

* ಚೆಂಡಿನ ಎರಡು ಭಾಗಗಳಲ್ಲಿ ಒಂದು ಭಾಗ ಹೊಳಪು ಹೊಂದಿದ್ದು, ಮತ್ತೊಂದು ಭಾಗ ಒರಟಾಗಿದ್ದರೆ , ಆ ಚೆಂಡು ರಿವರ್ಸ್ ಸ್ವಿಂಗ್ ಗೆ ನೆರವಾಗುತ್ತದೆ.

* ಬೌಲರ್ ಎಸೆದ ಚೆಂಡು ಗಾಳಿಯಲ್ಲಿ ವೇಗವಾಗಿ ಮುನ್ನುಗ್ಗುತ್ತಿರುವ ಸಂದರ್ಭದಲ್ಲಿ ಚೆಂಡು ಸಹಜವಾಗಿಯೇ ನುಣುಪಾದ ಮತ್ತು ಹೊಳಪನ್ನು ಹೊಂದಿರುವ ಭಾಗದ ಕಡೆಗೆ ಹೆಚ್ಚು ವಾಲುತ್ತದೆ.

* 40 ಓವರ್‌ಗಳ ನಂತರದ ಚೆಂಡಿನಲ್ಲಿ ರಿವರ್ಸ್ ಸ್ವಿಂಗ್ ಸಾಧ್ಯ.

## ವಿಜ್ಞಾನ ಮತ್ತು ತಂತ್ರಜ್ಞಾನ

### 1. ಕೃತಕ ಬುದ್ಧಿಮತ್ತೆ ತಂತ್ರಜ್ಞಾನದಿಂದ ಚಂದ್ರನ ಮೇಲಿನ ಕುಳಿಗಳ ಪತ್ತೆ:

* ಚಂದ್ರನಲ್ಲಿ ಕುಳಿಗಳಿವೆ ಎಂಬುದು ಎಲ್ಲರಿಗೂ ತಿಳಿದಿರುವ ವಿಚಾರ.

* ಈ ಕುಳಿಗಳ ಕುರಿತು ಈಗಾಗಲೇ ಸಾಕಷ್ಟು ಅಧ್ಯಯನಗಳು ಕೂಡ ನಡೆದಿವೆ.

* ಆದರೆ, ಹೊಸ ವಿಚಾರ ಏನೆಂದರೆ ಹೊಸ ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಸಹಾಯದಿಂದ ಚಂದ್ರನಲ್ಲಿರುವ ಕುಳಿಗಳನ್ನು ವಿಜ್ಞಾನಿಗಳು ಪತ್ತೆ ಮಾಡಿದ್ದಾರೆ.

* ಲೂನಾರ್ ಮ್ಯಾಪಿಂಗ್ ತಂತ್ರಜ್ಞಾನದ ಸಹಾಯದಿಂದ ಕೆಲವೇ ಗಂಟೆಗಳಲ್ಲಿ 6,000 ಹೊಸ ಕುಳಿಗಳನ್ನು ಪತ್ತೆ ಮಾಡಲಾಗಿದ್ದು, ಇವು ಕೆಲವು ಬಿಲಿಯನ್ ವರ್ಷಗಳಷ್ಟು ಹಳೆಯದಾದ ಕುಳಿಗಳು ಎಂದು ವಿಜ್ಞಾನಿಗಳು ಹೇಳಿದ್ದಾರೆ.



JNANAGANGOTHRI Inspiring to serve...

* ಇಕಾರ್ಸ್ ಜರ್ನಲ್‌ನಲ್ಲಿ ಪ್ರಕಟವಾಗಿರುವ ಅಧ್ಯಯನ ವರದಿಯಲ್ಲಿ ಈ ಬಗ್ಗೆ ಉಲ್ಲೇಖಿಸಲಾಗಿದ್ದು , ಈ ಹಿಂದೆ ಪತ್ತೆಯಾಗದ 6,000 ಕುಳಿಗಳನ್ನು ವಿಜ್ಞಾನಿಗಳು ಈಗ ಪತ್ತೆ ಮಾಡಿದ್ದಾರೆ.

* ಈ ತಂತ್ರಜ್ಞಾನದ ಸಹಾಯದಿಂದ ಕುಳಿಗಳ ಕುರಿತು ಇನ್ನಷ್ಟು ಅಧ್ಯಯನ ಕೈಗೊಳ್ಳುವುದಾಗಿ ವಿಜ್ಞಾನಿಗಳು ತಿಳಿಸಿದ್ದಾರೆ.

* ಇದೇ ತಂತ್ರಜ್ಞಾನದ ಸಹಾಯದಿಂದ ಬುಧ ಗ್ರಹದಲ್ಲಿನ ಕುಳಿಗಳನ್ನೂ ಸಹ ಪತ್ತೆ ಮಾಡಲಾಗಿದೆ ಎಂದು ವಿಜ್ಞಾನಿಗಳು ಹೇಳಿದ್ದಾರೆ.

## 2. ಸೌರವ್ಯೂಹದ ಹೊರಗೆ ಭೂಮಿಗಾತ್ರದ ಗ್ರಹ!

* ಸೌರವ್ಯೂಹದ ವ್ಯಾಪ್ತಿಯಿಂದ ಹೊರಗೆ ಬುಧ ಗ್ರಹವನ್ನು ಹೋಲುವಂತಹ ಭೂಮಿ ಗಾತ್ರದ ಗ್ರಹವನ್ನು ಪತ್ತೆಹಚ್ಚಿರುವುದಾಗಿ ಬ್ರಿಟನ್‌ನ ವಾರ್‌ವಿಕ್ ಯುನಿವರ್ಸಿಟಿಯ ಡೇವಿಡ್ ಆರ್ಮ್‌ಸ್ಟ್ರಾಂಗ್ ತಿಳಿಸಿದ್ದಾರೆ.

* ಕೆ2 ಟೆಲಿಸ್ಕೋಪ್ ಬಳಸಿಕೊಂಡು ಡೂಬಲ್ ಮಾದರಿಯ ಮೂಲಕ ಈ ಗ್ರಹವನ್ನು ತಮ್ಮ ನೇತೃತ್ವದ ಖಗೋಳ ಶಾಸ್ತ್ರಜ್ಞರ ತಂಡ ಪತ್ತೆ ಹಚ್ಚಿತು.

* ಈ ಹೊಸ ಗ್ರಹಕ್ಕೆ K2-229b' ಎಂದು ಹೆಸರಿಡಲಾಗಿದೆ.

* ಇದು ಭೂಮಿಯ ಗಾತ್ರಕ್ಕಿಂತ ಶೇಕಡ 20 ಹೆಚ್ಚು ದೊಡ್ಡದಷ್ಟೇ ಅಲ್ಲ, 2.6 ಪಟ್ಟು ಹೆಚ್ಚು ತೂಕ ಹೊಂದಿದೆ.

* ಆ ಗ್ರಹದ ಮೇಲಿನ ದಿನದ ತಾಪಮಾನ 2000 ಡಿಗ್ರಿ ಸೆಲ್ಸಿಯಸ್‌ಗೂ ಅಧಿಕ ಎಂದು ಅಂದಾಜಿಸಲಾಗಿದೆ.

* ಭೂಮಿಯಿಂದ 34 ಕೋಟಿ ಜ್ಯೋತಿರ್‌ವರ್ಷ ದೂರದಲ್ಲಿರುವ ಅದು ಸೂರ್ಯನಿಗೆ ಅತಿ ಸನಿಹದಲ್ಲೇ ಇದೆ.

* ಪ್ರತಿ 14 ಗಂಟೆಗೆ ಈ ಗ್ರಹ ತನ್ನ ಕಕ್ಷೆಯಲ್ಲಿ ಒಂದು ಸುತ್ತು ಬರುತ್ತದೆ.

* ಈ ಗ್ರಹ ಕೂಡ ಕನಿಷ್ಠ ಮೂರು ಗ್ರಹಗಳ ಗುಂಪಿನಲ್ಲಿ ಅತ್ಯಂತ ಒಳಭಾಗದಲ್ಲಿರುವಂಥದ್ದು ಎಂಬ ಅಂಶ ನೇಚರ್ ಆಸ್ಟ್ರೋನಮಿ ಎಂಬ ಜರ್ನಲ್ ಪ್ರಕಟಿಸಿರುವ ಡೇವಿಡ್ ಅವರ ಅಧ್ಯಯನ ವರದಿಯಲ್ಲಿದೆ.

# ಅಂತಾರಾಷ್ಟ್ರೀಯ

## 1. ಕೋಟಕ್ ಸಮಿತಿ ಶಿಫಾರಸ್ಸಿಗೆ ಸಮ್ಮತಿ:

* ಕಾರ್ಪೊರೇಟ್ ಆಡಳಿತ ಸುಧಾರಣೆ ಮತ್ತು ಮ್ಯೂಚುವಲ್ ಫಂಡ್ ಯೋಜನೆಗಳಲ್ಲಿ ಹೂಡಿಕೆದಾರರು ಪಾಲ್ಗೊಳ್ಳುವಿಕೆ ಹೆಚ್ಚಿಸಲು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಹಲವಾರು ಕ್ರಮಗಳನ್ನು ಪ್ರಕಟಿಸಿದೆ.

* ಷೇರುಪೇಟೆ ವಹಿವಾಟಿನ ಸ್ವರೂಪದಲ್ಲಿ ಬದಲಾವಣೆ ತರಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸಲಹೆ ನೀಡಲು ರಚಿಸಲಾಗಿದ್ದ ಉದಯ್ ಕೋಟಕ್ ಸಮಿತಿ ನೀಡಿದ್ದ ಶಿಫಾರಸ್ಸುಗಳನ್ನು 'ಸೆಬಿ' ಭಾಗಶಃ ಅಂಗೀಕರಿಸಿದೆ.

* ಮ್ಯೂಚುವಲ್ ಫಂಡ್ ಯೋಜನೆಗಳ ಮೇಲಿನ ಹೆಚ್ಚುವರಿ ವೆಚ್ಚದ ಶುಲ್ಕವನ್ನು ಶೇ 0.20 ರಿಂದ ಶೇ 0.5ಕ್ಕೆ ತಗ್ಗಿಸುವ ನಿರ್ಧಾರ ಕೈಗೊಂಡಿದೆ.

* ಷೇರುಪೇಟೆಯಲ್ಲಿ ವ್ಯವಹರಿಸುವ ಸಂಸ್ಥೆಗಳಿಗೆ ಅಗತ್ಯವಾದ ದುಬಾರಿ ಸಂಪರ್ಕ ಜಾಲದ ಸೇವೆಯನ್ನು ಬಾಡಿಗೆ ನೀಡುವ , ಈಕ್ವಿಟಿ ಡೆರಿವೇಟಿವ್ ಮಾರುಕಟ್ಟೆ ಬಲಪಡಿಸುವ ಮತ್ತು ಸ್ವಾಧೀನ ನಿಯಮಗಳಿಗೆ ತಿದ್ದುಪಡಿ ತರುವ ಶಿಫಾರಸ್ಸುಗಳನ್ನು ಅಂಗೀಕರಿಸಿದೆ.

* ಸಮಿತಿಯ ಒಟ್ಟು 80 ಶಿಫಾರಸುಗಳ ಪೈಕಿ , 'ಸೆಬಿ' 40 ಸಲಹೆಗಳನ್ನು ಯಾವುದೇ ಬದಲಾವಣೆ ಇಲ್ಲದೆ ಒಪ್ಪಿಕೊಂಡಿದೆ.

* ಅವುಗಳ ಪೈಕಿ ಷೇರುಪೇಟೆಯಲ್ಲಿ ವಹಿವಾಟು ನಡೆಸುವ ಉದ್ದಿಮೆ ಸಂಸ್ಥೆಗಳ ನಿರ್ದೇಶಕರ ಸಂಖ್ಯೆಯನ್ನು 2020ರ ಏಪ್ರಿಲ್ ವೇಳೆಗೆ ಗರಿಷ್ಠ 7ಕ್ಕೆ ಸೀಮಿತಗೊಳಿಸಲು ಸಮ್ಮತಿಸಲಾಗಿದೆ.

* 18 ಶಿಫಾರಸ್ಸುಗಳನ್ನು ತಿರಸ್ಕರಿಸಲಾಗಿದೆ.

* ಹಣಕಾಸು ಮಾರುಕಟ್ಟೆಯಲ್ಲಿ ಅತ್ಯಂತ ತ್ವರಿತವಾಗಿ ನಿರ್ಧಾರ ಕೈಗೊಳ್ಳುವ ಮತ್ತು ವಹಿವಾಟು ನಡೆಸುವಾಗ ಸಂಕೀರ್ಣ ಸ್ವರೂಪದ ಗಣಿತ ಮಾದರಿ ಮತ್ತು ಸೂತ್ರಗಳನ್ನು ಬಳಸುವುದನ್ನು ಬಲಪಡಿಸಲೂ (ಅಲ್ಗೊ. ಟ್ರೇಡಿಂಗ್) 'ಸೆಬಿ' ನಿರ್ಧರಿಸಿದೆ.

* ಷೇರು ಪೇಟೆಯಲ್ಲಿ ವ್ಯವಹರಿಸುವ ಸಣ್ಣ ಪ್ರಮಾಣದ ಸಂಸ್ಥೆಗಳಿಗೆ ಅಗತ್ಯವಾದ ದುಬಾರಿ ಸಂಪರ್ಕ ಜಾಲದ ಬಾಡಿಗೆ ಸೇವೆ ಒದಗಿಸುವುದನ್ನು ಕಡ್ಡಾಯ ಮಾಡಲಾಗಿದೆ.

* ಕೆಲ ಸೇವೆಗಳನ್ನು ಉಚಿತವಾಗಿ ನೀಡಲೂ ನಿರ್ಧರಿಸಲಾಗಿದೆ.

* ದುಬಾರಿ ವೆಚ್ಚದ ಕಾರಣಕ್ಕೆ ಷೇರುಪೇಟೆಯ ಹಲವಾರು ಸಣ್ಣ ಮತ್ತು ಮಧ್ಯಮ ಗಾತ್ರದ ಸದಸ್ಯ ಸಂಸ್ಥೆಗಳು ಇಂತಹ ಸೇವೆಗಳನ್ನು ಪಡೆಯಲು ಸಾಧ್ಯವಾಗುತ್ತಿರಲಿಲ್ಲ.

ಆಡಳಿತ ಸುಧಾರಣೆ:

* ಸಮಿತಿಯ ಶಿಫಾರಸ್ಸುಗಳನ್ನು ಜಾರಿಗೆ ತರುವುದರಿಂದ ಕಾರ್ಪೊರೇಟ್ ಆಡಳಿತದ ಗುಣಮಟ್ಟ ಗಮನಾರ್ಹವಾಗಿ ಸುಧಾರಿಸಲಿದೆ. ಮ್ಯೂಚುವಲ್ ಫಂಡ್‌ಗಳಲ್ಲಿನ ಹೂಡಿಕೆ ಮೇಲಿನ ವೆಚ್ಚ ತಗ್ಗಿಸುವುದರಿಂದ ಈ ಉದ್ಯಮದ ಪ್ರಗತಿಗೆ ನೆರವಾಗಲಿದೆ.

## 2. ವೈಜ್ಞಾನಿಕ ಸಲಹೆಗಾರರಾಗಿ ಕೆ.ವಿ. ರಾಘವನ್:

* ಕೇಂದ್ರ ಸರ್ಕಾರದ ವೈಜ್ಞಾನಿಕ ಸಲಹೆಗಾರರಾಗಿ ಕೃಷ್ಣಸ್ವಾಮಿ ವಿಜಯ ರಾಘವನ್ ಆಯ್ಕೆಯಾಗಿದ್ದಾರೆ.

* ಅವರು ಈ ಮೊದಲು ರಾಷ್ಟ್ರೀಯ ಜೀವವಿಜ್ಞಾನ ಕೇಂದ್ರದ ಮಾಜಿ ನಿರ್ದೇಶಕರಾಗಿ , ಜೀವತಂತ್ರಜ್ಞಾನ ವಿಭಾಗದ ಕಾರ್ಯದರ್ಶಿಯಾಗಿ, ಐಸಿಎಂಆರ್‌ನ ಮಹಾ ನಿರ್ದೇಶಕರಾಗಿ (ಹೆಚ್ಚುವರಿ) ಹಾಗೂ ಆರೋಗ್ಯ ಸಂಶೋಧನಾ ವಿಭಾಗದ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ.1

* 954ರ ಫೆಬ್ರವರಿ 3ರಂದು ಜನಿಸಿದ ಕೆ. ವಿಜಯ ರಾಘವನ್ ಬಾಲ್ಯದ ಶಿಕ್ಷಣವನ್ನು ತವರಿನಲ್ಲೇ ಪೂರೈಸಿದರು.

* ಕಾನ್ಪುರ ಐಐಟಿಯಿಂದ ಇಂಜಿನಿಯರಿಂಗ್ ಪದವಿ ಪಡೆದ ಅವರು, ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್‌ನಿಂದ ಪಿಎಚ್‌ಡಿ ಪಡೆದಿದ್ದಾರೆ.

* ಇದರೊಂದಿಗೆ ಕ್ಯಾಲಿಫೋರ್ನಿಯಾ ಟೆಕ್ನಾಲಜಿ ಇನ್‌ಸ್ಟಿಟ್ಯೂಟ್ ನಲ್ಲಿ ಸೀನಿಯರ್ ರಿಸರ್ಚ್ ಫೆಲೋ , ರಾಯಲ್ ಸೊಸೈಟಿ ಫೆಲೋ ಹಾಗೂ ಇಂಡಿಯನ್ ಅಕಾಡೆಮಿ ಆಫ್ ಸೈನ್ಸಸ್ ಫೆಲೋ ಆಗಿಯೂ ಕಾರ್ಯನಿರ್ವಹಿಸಿದ್ದಾರೆ.

* ಇವರ ಸೇವೆಯನ್ನು ಗಮನಿಸಿದ ಕೇಂದ್ರ ಸರ್ಕಾರ 2013ರಲ್ಲಿ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿದೆ.

* ಅಣು ಜೀವವಿಜ್ಞಾನದಲ್ಲಿ ಅಪಾರ ಜ್ಞಾನ ಹೊಂದಿರುವ ವಿಜಯ ರಾಘವನ್ , ಜೀವಿಯ ಬೆಳವಣಿಗೆಯ ಹಂತದಲ್ಲಿ ನರಮಂಡಲ ಮತ್ತು ಸ್ನಾಯುಗಳನ್ನು ನಿಯಂತ್ರಿಸುವ ತಂತ್ರಗಳು ಹಾಗೂ ಪ್ರಮುಖ ತತ್ವಗಳ ಕುರಿತಾಗಿ ಸಂಶೋಧನೆ ನಡೆಸುತ್ತಿದ್ದಾರೆ.

## 3. ಮಹಾವೀರ ಜಯಂತಿ:

* ಇಂದು ಮಹಾವೀರ ಜಯಂತಿ.

* ಜೈನ ಧರ್ಮದ ಹಬ್ಬಗಳಲ್ಲಿ ಮಹಾವೀರ ಜಯಂತಿ ಮುಖ್ಯವಾದುದು.

* ಕೊನೆಯ ತೀರ್ಥಂಕರರಾದ ಮಹಾವೀರ ಜನ್ಮದಿನದ ಪ್ರಯುಕ್ತ ಈ ದಿನವನ್ನು ಆಚರಿಸಲಾಗುತ್ತದೆ.

* ಮಹಾವೀರರ ಅಹಿಂಸಾ ಸಂದೇಶವನ್ನು ಬೋಧಿಸುವುದು ಈ ದಿನದ ವಿಶೇಷವಾಗಿದೆ.

* ಮಹಾವೀರರು ಜನಿಸಿದ್ದು ಚೈತ್ರ ಮಾಸದ ಶುಕ್ಲ ತ್ರಯೋದಶಿಯಂದು ಕ್ರಿ.ಪೂ. 599ರಲ್ಲಿ ಆಂಗ್ಲ ಕ್ಯಾಲೆಂಡರ್ ಪ್ರಕಾರ ಈ ಹಬ್ಬ ಮಾರ್ಚ್ ಕೊನೆಯಲ್ಲಿ ಅಥವಾ ಏಪ್ರಿಲ್ ಆರಂಭದಲ್ಲಿ ಬರುತ್ತದೆ.

* ಜೈನ ಗ್ರಂಥಗಳ ಪ್ರಕಾರ ಮಹಾವೀರರು ಪ್ರಜಾಪ್ರಭುತ್ವದ ರಾಜ್ಯವಾದ ವಾಜೈಯಲ್ಲಿ ಜನಿಸಿದರು.

* ಬಹುಪ್ರಾಚೀನ ಜೈನ ಧರ್ಮದ ಉಗಮ ಪ್ರಥಮ ತೀರ್ಥಂಕರರಾದ ಭಗವಾನ್ ಋಷಭದೇವರ ಆವಿರ್ಭಾವದೊಂದಿಗೆ ಉಂಟಾಯಿತು.

* ಆದರೆ, 24ನೆಯ ತೀರ್ಥಂಕರರಾದ ಭಗವಾನ್ ಮಹಾವೀರರನ್ನೇ ಈ ಧರ್ಮದ ನಿಜವಾದ ಪ್ರತಿಷ್ಠಾಪಕರೆಂದು ಗೌರವ ನೀಡಲಾಗಿದೆ.

* ತಮ್ಮ ಜೀವನದ ಪ್ರಥಮಭಾಗವನ್ನು ಅತ್ಯಂತ ಕಠೋರ ತಪಸ್ಸಿನಲ್ಲಿ ಕಳೆದು , ಕಡೆಯ ಮೂವತ್ತು ವರ್ಷಗಳನ್ನು ಜೀವಿಗಳ ಉದ್ಧಾರಕ್ಕಾಗಿ ಮುಡಿಪಿಟ್ಟರು.

* ಮಹಾವೀರರ ಉಪದೇಶಗಳು ಪ್ರವಾದಿಗಳ ಉಪದೇಶಗಳಂತೆಯೇ ಸಹಜಗಮ್ಯ , ಸರಳ ಮತ್ತು ಪರಿಪೂರ್ಣವಾಗಿದೆ.

## 4. ಸೌಭಾಗ್ಯ ಯೋಜನೆ ಜಾರಿಗೆ ಉದ್ಯೋಗಿಗಳಿಗೆ ತರಬೇತಿ:

* ಪ್ರಧಾನ ಮಂತ್ರಿ ಸಹಜ್ ಬಿಜ್ಲಿ ಹರ್ ಘರ್ ಯೋಜನೆ (ಸೌಭಾಗ್ಯ ಯೋಜನೆಯ ತ್ವರಿತ ಅನುಷ್ಠಾನಕ್ಕಾಗಿ ಇಂಧನ ಸಚಿವಾಲಯವು ಕೌಶಲ ಅಭಿವೃದ್ಧಿ ಮತ್ತು ವಾಣಿಜ್ಯೋದ್ಯಮ ಇಲಾಖೆ ಸಹಭಾಗಿತ್ವದೊಂದಿಗೆ ಆರು ರಾಜ್ಯಗಳಲ್ಲಿ ಉದ್ಯೋಗಿಗಳಿಗೆ ತರಬೇತಿ ನೀಡಲು ಮುಂದಾಗಿದೆ.
* ಅಸ್ಸಾಂ, ಬಿಹಾರ, ಮಧ್ಯಪ್ರದೇಶ, ಜಾರ್ಖಂಡ್, ಒಡಿಶಾ ಮತ್ತು ಉತ್ತರ ಪ್ರದೇಶಗಳಲ್ಲಿ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಿದೆ.
* ಸೌಭಾಗ್ಯ ಯೋಜನೆಯಡಿ ವಿದ್ಯುತ್ ಕ್ಷೇತ್ರದ ಯೋಜನೆಗಳ ಅನುಷ್ಠಾನಕ್ಕಾಗಿ ಸುಮಾರು 47,000 ವಿತರಣಾ ಲೈನ್‌ಮನ್ ಮತ್ತು 8,500 ತಾಂತ್ರಿಕ ಸಹಾಯಕರಿಗೆ ತರಬೇತಿ ನೀಡಲು ಉದ್ದೇಶಿಸಿದೆ.
* ಜಿಲ್ಲಾ ಮಟ್ಟದಲ್ಲಿ ಲಭ್ಯವಿರುವ ಐಟಿಐ ಸೌಕರ್ಯ ಹಾಗೂ ರಾಜ್ಯ ವಿದ್ಯುತ್ ವಿತರಣಾ ಸೌಲಭ್ಯದಿಂದ ದೊರೆಯುವ ಮೂಲಸೌಕರ್ಯಗಳ ಮೂಲಕ ಉದ್ಯೋಗಿಗಳಿಗೆ ಕೌಶಲ ತರಬೇತಿ ನೀಡಲಾಗುವುದು.
* ಇಂಧನ ಸಚಿವಾಲಯದಡಿ ರೂರಲ್ ಎಲೆಕ್ಟ್ರಿಫಿಕೇಷನ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿಮಿಟೆಡ್ ಕಂಪನಿಯು ದೇಶಾದ್ಯಂತ ಯೋಜನೆಯ ಕಾರ್ಯಾಚರಣೆಗೆ ಶ್ರಮಿಸಲಿದೆ.

JNANAGANGOTHRI
Inspiring to serve...